ದಿ: 13.01.2026 ರಂದು ವಾದಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಪ್ರತಿವಾದಿ ಪರ ಶ್ರೀಯುತ ಆರ್.ಕೆ. ವಕೀಲರಿಂದ.

4. ಸಾಮಾನ್ಯವಾಗಿ ಪೌತಿ ಖಾತೆಯನ್ನು ಜಮೀನಿನ ಮಾಲೀಕ ಮೃತ ಪಟ್ಟ ನಂತರ ಆತನ ವಾರಸುದಾರರ ಹೆಸರಿಗೆ ಮಾಡಲಾಗುತ್ತದೆ ಎಂದರೆ ಸರಿಯಲ್ಲ. ನಾವು ಸೊಣ್ಣಪ್ಪರವರ ವಾರಸುದಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ವೆಂಕಟರಮಣಪ್ಪ. ಸರ್ವೆ ನಂ.133 ಜಮೀನಿನ ಕ್ರಯ ಪತ್ರವು ಸೊಣ್ಣಪ್ಪರವರ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಸದರಿ ಸೊಣ್ಣಪ್ಪರವರಿಗೆ ಹೆಂಡತಿ ಮತ್ತು ಮಕ್ಕಳು ಇದ್ದರು ಎಂದರೆ ಸರಿ. 1998-99 ನೇ ಸಾಲಿನಲ್ಲಿ ಸರ್ವೆ ನಂ.133 ಜಮೀನಿಗೆ ಸಂಬಂಧಿಸಿದಂತೆ ಸೊಣ್ಣಪ್ಪನವರ ಮಗನಾದ ತಿಪ್ಪಣ್ಣರವರ ಹೆಸರಿಗೆ 12 ಗುಂಟೆ ಜಮೀನಿನ ಕುರಿತು ಮ್ಯುಟೇಷನ್ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 8 ಗುಂಟೆ ಬದಲು 12 ಗುಂಟೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ತಿಪ್ಪಣ್ಣನವರ ಹೆಸರಿಗೆ ಎಂ.ಆರ್ ಸಂಖ್ಯೆ 6/1998-99 ಮ್ಯುಟೇಷನ್ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.133 ಜಮೀನಿನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ ಸಾಕ್ಷಿಯು ಮುಂದುವರೆದು ನಮ್ಮ ಅಣ್ಣ ತಮ್ಮಂದಿರ ಪ್ರಕಾರ 30 ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. 1998 ನೇ ಸಾಲಿನಲ್ಲಿ ಸದರಿ ನಿಮ್ಮ ಅಣ್ಣ ತಮ್ಮಂದಿರ ಪ್ರಕಾರ ಇದೆ ಎಂದು ಹೇಳುವ 30 ಗುಂಟೆ ಜಮೀನಿನ ಪೈಕಿ 12 ಗುಂಟೆ ಜಮೀನ್ನನ್ನು ತಿಪ್ಪಣ್ಣನವರ ಹೆಸರಿಗೆ ಮ್ಯುಟೇಷನ್ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ತಿಪ್ಪಣ್ಣನವರು 8 ಗುಂಟೆ ಬದಲು 12 ಗುಂಟೆ ಕುರಿತು ಸ್ವತ: ಹೇಳಿಕೆ ನೀಡಿ ಬದಲಾಯಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ತಿಪ್ಪಣ್ಣರವರ ಹೆಸರಿಗೆ ಮ್ಯುಟೇಷನ್ ಆದ ನಂತರ ಪಹಣಿ ಪತ್ರಿಕೆಯಲ್ಲಿ ತಿಪ್ಪಣ್ಣರವರ ಹೆಸರಿನ ಮುಂದೆ 12 ಗುಂಟೆ ಜಮೀನು ಎಂದು ಸತತವಾಗಿ ಮುಂದುವರೆಯುತ್ತಾ ಬಂದಿರುತ್ತದೆ ಎಂದರೆ ಸರಿಯಲ್ಲ.

5. ಪ್ರಸ್ತುತ ದಾವೆ ದಾಖಲಿಸುವ ದಿನದವರೆಗೂ ತಿಪ್ಪಣ್ಣರವರ ಹೆಸರಿನಲ್ಲಿ 12 ಗುಂಟೆ ಕುರಿತು ಕಂದಾಯ ದಾಖಲೆ ಮುಂದುವರೆಯುತ್ತಾ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ತಿಪ್ಪಣ್ಣರವರ ಹೆಸರಿಗೆ ಮ್ಯುಟೇಷನ್ ಆದ ನಂತರ 12 ಗುಂಟೆ ಜಮೀನು ಪೊಡಿ ಆಗಿ ರಿಸರ್ವೆ ನಂ.133/2 ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.133 ಪೊಡಿಯನ್ನು ಎಂ.ಆರ್.5/20-21ರಂತೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಜಮೀನಿನ ಕುರಿತು ಪ್ರತಿ ವರ್ಷ ಪಹಣಿ ಪತ್ರಿಕೆಯನ್ನು ಪಡೆದುಕೊಳ್ಳುತ್ತಿದ್ದೆ. ಸಾಕ್ಷಿಯು ಮುಂದುವರೆದು 22 ಜಮೀನಿನ ಕುರಿತು ಪಹಣಿ ಪತ್ರಿಕೆ ಪಡೆದುಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. 1998-99 ನೇ ಸಾಲಿನಿಂದ ದಾವಾ ಆಸ್ತಿಯ ಕಂದಾಯ ಪಾವತಿಸುತ್ತಾ ಬಂದಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 22 ಗುಂಟೆ ಕುರಿತು ಕಂದಾಯ ಪಾವತಿಸಿರುತ್ತೇನೆ ಎಂದು ನುಡಿಯುತ್ತಾರೆ. 1998-99 ನೇ ಸಾಲಿನ ಕಂದಾಯವನ್ನು ಪಾವತಿಸಿರುತ್ತೇನೆ ಮತ್ತು ಸದರಿ ಸಾಲಿನ ಪಹಣಿ ಪತ್ರಿಕೆಯನ್ನು ಪಡೆದುಕೊಂಡಿರುತ್ತೇನೆ. 1998-99 ನೇ ಸಾಲಿನಲ್ಲಿ ತಿಪ್ಪಣ್ಣರವರ ಹೆಸರಿಗೆ 12 ಗುಂಟೆ ನಮೂದಾದ ವಿಚಾರ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ನಾನು ಪಹಣಿ ಪತ್ರಿಕೆಗಳನ್ನು ಪಡೆದುಕೊಳ್ಳುತ್ತಿದ್ದಾಗ ನಮೂದುಗಳು ಸರಿ ಇವೆಯೋ ಅಥವಾ ಇಲ್ಲವೋ ಎಂದು ತಿಳಿದುಕೊಳ್ಳುತ್ತಿದ್ದೆ. ಸಾಕ್ಷಿಯು ಮುಂದುವರೆದು ಆ ರೀತಿ 22 ಗುಂಟೆ ಕುರಿತು ತಿಳಿದುಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ. ಆ ರೀತಿ 1998-99 ನೇ ಸಾಲಿನ ಪಹಣಿ ಪತ್ರಿಕೆಯನ್ನು ಪಡೆದುಕೊಂಡಾಗ ನನ್ನ ಹೆಸರಿನ ಕೆಳಗೆ ತಿಪ್ಪಣ್ಣನವರ ಹೆಸರಿನಲ್ಲಿ 12 ಗುಂಟೆ ನಮೂದಾಗಿರುವುದು ಕಂಡುಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರುತ್ತದೆ.

6. ಆ ರೀತಿ 1998-99 ನೇ ಸಾಲಿನಲ್ಲಿ ತಿಪ್ಪಣ್ಣನವರ ಹೆಸರಿಗೆ 12 ಗುಂಟೆ ಜಮೀನು ನಮೂದಾದ ಕುರಿತು ಕಂದಾಯ ಇಲಾಖೆಯಲ್ಲಿ ಮೇಲ್ಮನವಿ ಸಲ್ಲಿಸಿ ಪ್ರಶ್ನಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ. ನಿಪಿ.4 ರಲ್ಲಿ ತಿಪ್ಪಣ್ಣ ನವರ ಹೆಸರಿಗೆ 12 ಗುಂಟೆ ನಮೂದಾಗಿರುವುದು ಕಂಡು ಬರುತ್ತದೆ ಎಂದರೆ ಸರಿಯಲ್ಲ. ನಿಪಿ.4 ರಲ್ಲಿನ ನಮೂದಿನ ಕುರಿತು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. 1998-99 ನೇ ಸಾಲಿನಿಂದ ಪಡೆದುಕೊಂಡಿದ್ದೇನೆ ಎಂದು ಹೇಳುವ ಪಹಣಿ ಪತ್ರಿಕೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ದಿ: 21.09.2000 ರಂದು ತಿಪ್ಪಣ್ಣರವರು ೨ನೇ ಪ್ರತಿವಾದಿಗೆ 12 ಗುಂಟೆ ಜಮೀನಿನ ಕುರಿತು ದಾನ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿ: 21.09.2000 ದಾನ ಪತ್ರದಂತೆ 2ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲೆಗಳು ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ೨ನೇ ಪ್ರತಿವಾದಿ ದಾನ ಪತ್ರದ ಮೂಲಕ 12 ಗುಂಟೆ ಜಮೀನ್ನನ್ನು ಪಡೆದುಕೊಂಡ ನಂತರ ಭಾರತ್ ಕೋ ಆಪರೇಟಿವ್ ಬ್ಯಾಂಕಿನಲ್ಲಿ ಸಾಲ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಿಪ್ಪಣ್ಣನವರು ಸ್ವಾಧೀನದಲ್ಲಿದ್ದ 12 ಗುಂಟೆ ಜಮೀನಿನ ಕುರಿತು ಪೋಡಿ ಹದ್ದು ಬಸ್ತು ಮಾಡಿ ಹೊಸ ಸರ್ವೆ ನಂ.133/2 ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸರ್ವೆ ನಂ.133 ಜಮೀನ್ನನ್ನು ರೀ ಸರ್ವೆ ನಂ.133/2 ಎಂದು ಪೋಡಿ ಮಾಡಿರುವುದನ್ನು ಎಲ್ಲಿಯು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ 1998-99 ನೇ ಸಾಲಿನಲ್ಲಿ ತಿಪ್ಪಣ್ಣನವರ ಹೆಸರಿಗೆ 12 ಗುಂಟೆ ಜಮೀನು ಪೋಡಿ ಆದ ನಂತರ ನಾನು ಮತ್ತು ನನ್ನ ಸಹೋದರರು 2016 ನೇ ಸಾಲಿನಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡಿರುವುದು ಸರಿ ಎಂದು ನುಡಿಯುತ್ತಾರೆ. ನಾನು ವಾದ ಪತ್ರದಲ್ಲಿ ಕಾಣಿಸಿರುವಂತೆ ತಿಪ್ಪಣ್ಣನವರ ಹೆಸರಿಗೆ 12 ಗುಂಟೆ ಜಮೀನು ಪೋಡಿ ಆದ ನಂತರ ನಾನು 22 ಗುಂಟೆ ಜಮೀನಿನ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. 1998-99 ರಿಂದ ಇಲ್ಲಿಯವರೆಗೂ ನಾನು ಒತ್ತುವರಿಯ ಕುರಿತು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತಿಪ್ಪಣ್ಣನವರ ಹೆಸರಿಗೆ ಸರ್ವೆ ನಂ.133 ಜಮೀನಿನಲ್ಲಿ 12 ಗುಂಟೆ ನಮೂದು ಮಾಡಿದ ನಂತರ ತಿಪ್ಪಣ್ಣನವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತಿಪ್ಪಣ್ಣನವರ ವಿರುದ್ಧ ಕ್ರಮ ಕೈಗೊಂಡಿದ್ದೇನೆ ಎಂದು ತೋರಿಸುವ ಕುರಿತು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ತಿಪ್ಪಣ್ಣನವರು ಸ್ವಾಧೀನದಲ್ಲಿದ್ದ 12 ಗುಂಟೆ ಜಮೀನು ೨ನೇ ಪ್ರತಿವಾದಿಯ ಸ್ವಾಧೀನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ೧ನೇ ಪ್ರತಿವಾದಿಯಿಂದ ೨ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಬಂದಿದ್ದ 12 ಗುಂಟೆ ಜಮೀನ್ನನ್ನು 3ನೇ ಪ್ರತಿವಾದಿಯು 2ನೇ ಪ್ರತಿವಾದಿಯಿಂದ ದಾನ ಪತ್ರದ ಮೂಲಕ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ೨ ಮತ್ತು ೩ನೇ ಪ್ರತಿವಾದಿಗಳು ದಾನ ಪತ್ರದ ಮೂಲಕ ಬಂದ ಜಮೀನಿನಲ್ಲಿ ಕಟ್ಟಡ ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿಯು ರಾತ್ರಿ ಸಮಯದಲ್ಲಿ ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ೨ ಮತ್ತು ೩ನೇ ಪ್ರತಿವಾದಿಗಳು ಕಟ್ಟಿರುವ ಕಟ್ಟಡ ಅವರ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

Case called out.
P.W.1 is present.
P.W.1 cross examined in full.
The counsel for the defendants submits application filed u/o 16 R 1 of CPC may be allowed.
Heard,
When the matter was posted for further evidence of plaintiff, at this stage the plaintiffs have filed the present application. The reason assigned for delay in filing list of witness is justified. Hence, application is allowed.
For further evidence of plaintiff by 29.01.2026.

**Prl.C.J. and JMFC.,Hoskote.**